

ಇಟಲಿಯ ಹೊಸ ತಲೆಮಾರಿನ ಲೇಖಕಿ ಇಲಾರಿಯ ಜುವಿನಾಟ್ಟೊ 1979ರ ಜೂನ್ 11ರಂದು ರೋಮ್‌ನಲ್ಲಿ ಜನಿಸಿದರು. ಪ್ರೌಢಶಾಲಾ ಶಿಕ್ಷಕಿಯಾಗಿರುವ ಇವರು ಮಕ್ಕಳಿಗೆ ಸಾಹಿತ್ಯ ಹಾಗೂ ಕಲಾ ಇತಿಹಾಸವನ್ನು ಬೋಧಿಸುತ್ತಾರೆ. ಕವಿತೆ, ಕಾದಂಬರಿ ಹಾಗೂ ಅನುವಾದ ಇವರ ಆಸಕ್ತಿಯ ಕ್ಷೇತ್ರಗಳು. ಜಾಗತಿಕ ಧರ್ಮಗಳ ಉಗಮ ಹಾಗೂ ವಿಕಾಸವನ್ನು ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಹಾಗೆ Figurative plastic art therapist ಆಗಿಯೂ ಕೆಲಸ ಮಾಡುತ್ತಾರೆ. ಸದ್ಯ ಮಧ್ಯ ಇಟಲಿಯ ಹಳ್ಳಿಗಾಡಿನ ಪ್ರದೇಶ ಸಬೀನಾ ಬೆಟ್ಟದ ಸಾಲುಗಳಲ್ಲಿ ವಾಸವಾಗಿದ್ದಾರೆ.

## ಇಲಾರಿಯ ಜುವಿನಾಟ್ಟೊ ಸಂದರ್ಶನ

**◆ ಬಾಲ್ಯದ ತುಂಟಾಟದ ಘಟನೆ ಯಾವುದಾದರೂ ನೆನಪಿದೆಯಾ?**

ಪ್ರೌಢಶಿಕ್ಷಣ ಮುಗಿದ ನಂತರ ನಾನು ಇಕ್ಕಟ್ಟಿಗೆ ಸಿಲುಕಿದ್ದೆ. ಚಿತ್ರಕಲೆ ಮತ್ತು ಬರಹ ನನಗಿದ್ದ ಎರಡು ದೊಡ್ಡ ಪ್ಯಾಷನ್‌ಗಳು. ಇವೆರಡರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನನ್ನ ಗೊಂದಲವಾಗಿತ್ತು. ನಾನು ಮೊದಲಿಗೆ ಸ್ಕೂಲ್ ಆಫ್ ಆರ್ಕಿಟೆಕ್ಚರ್‌ಗೆ ಸೇರಿಕೊಂಡೆ. ಆದರೆ ಕೆಲವು ತಿಂಗಳುಗಳ ನಂತರ ನನಗೆ ಬಿಕ್ಕಟ್ಟು ಶುರುವಾಯಿತು. ನಾನು ಮಾಡಬೇಕಿರೋದು ಇದಲ್ಲ, ಬೇರೆ ಏನೋ ಅನ್ನೋದು ಅರ್ಥವಾಯಿತು...

**◆ ನಿಮ್ಮ ತಂದೆ-ತಾಯಿಗಳ ವೃತ್ತಿ ಏನಾಗಿತ್ತು? ನೀವೀಗ ಏನು ಕೆಲಸ ಮಾಡುತ್ತಿದ್ದೀರಿ?**

ನನ್ನ ತಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯುತ್ ಸಾಮಗ್ರಿಗಳನ್ನು ನಿರ್ಮಿಸುತ್ತಿದ್ದ ದೊಡ್ಡ ಕಂಪನಿಯೊಂದರಲ್ಲಿ ದುಡಿಯುತ್ತಿದ್ದರು. ನನ್ನ ತಾಯಿ ಸಾರ್ವಜನಿಕ ಸಂಸ್ಥೆಯೊಂದರಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕೆಲಕಾಲ ನಾನು ವಸ್ತು ಸಂಗ್ರಹಾಲಯವೊಂದರಲ್ಲಿ ರಿಸೆಪ್ಷನಿಸ್ಟ್ ಆಗಿದ್ದೆ. ಮತ್ತೀಗ ಪ್ರೌಢಶಾಲೆಯಲ್ಲಿ ಸಾಹಿತ್ಯ ಮತ್ತು ಕಲಾ ಇತಿಹಾಸವನ್ನು ಕಲಿಸುವ ಶಿಕ್ಷಕಿಯಾಗಿದ್ದೇನೆ.

**◆ ನೀವು ರೋಮ್ ನಗರದಲ್ಲಿ ಹುಟ್ಟಿ ಬೆಳೆದರೂ ಈಗ ಸಬೈನ್ ಬೆಟ್ಟದ ಸಾಲುಗಳಲ್ಲಿ ವಾಸಿಸುತ್ತಿದ್ದೀರಿ. ಕ್ಯಾಥೊಲಿಸಿಸಮ್ ಪೂರ್ವದ ಇಟಾಲಿಯನ್ ಭೂದೃಶ್ಯ ಮತ್ತು ಸಾಂಸ್ಕೃತಿಕ ಪರಂಪರೆ ನಿಮ್ಮ ಸೃಜನಶೀಲ ಧ್ವನಿಯನ್ನು ಹೇಗೆ ರೂಪಿಸಿದೆ?**

ಕ್ಯಾಥೊಲಿಸಿಸಮ್, ಪ್ರಸ್ತುತ ಇಟಲಿಯಲ್ಲಿ ಅತಿ ಹೆಚ್ಚು ಆಚರಣೆಯಲ್ಲಿರುವ ಪ್ರಬಲ ಕ್ರಿಶ್ಚಿಯನ್ ಮತಪಂಗಡ. ಆದಾಗ್ಯೂ ಪೇಗನ್ ಕಾಲದ ಕೆಲವು ಪ್ರಾಚೀನ ಸಂಪ್ರದಾಯಗಳು ಈಗಲೂ ಕಟ್ಟುನಿಟ್ಟಾಗಿ ಮುಂದುವರಿದಿವೆ. ನಿಮಗೆ ಗೊತ್ತಿರುವ ಹಾಗೆ ಪ್ರಾಚೀನ ರೋಮನ್ನರು ದೇವಾನುದೇವತೆಗಳನ್ನು ಪೂಜಿಸುತ್ತಿದ್ದರು ಮತ್ತು ಅಲ್ಲಿ ಪೂರ್ವಿಕರ ಆರಾಧನೆ ಸಾಮಾನ್ಯವಾಗಿತ್ತು. ಕುಟುಂಬದ ಗುರು ಹಿರಿಯರ ಆತ್ಮಗಳನ್ನು ಆಹ್ವಾನಿಸುತ್ತಿದ್ದರು. ನಾನು ರೋಮ್ ಬಿಟ್ಟು ಗುಡ್ಡಗಾಡಿನ ಒಂದು ಸಣ್ಣ ಪಟ್ಟಣದಲ್ಲಿ ನೆಲೆ ನಿಂತಾಗ, ನನ್ನ ಜೀವನ ವಿಧಾನ ಸಂಪೂರ್ಣ ಬದಲಾಯಿತು. ಬೆಟ್ಟಗುಡ್ಡ, ನದಿ- ಸರೋವರಗಳ ನಡುವೆ ನಿಸರ್ಗದ ಹೊಸ ಲಯವನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಆಗ ನಿಜ ಸೌಂದರ್ಯವೇನೆಂಬುದನ್ನು ಅರಿತೆ.

**◆ ನೀವು ಕವಿತೆಗೆ ತೆರೆದುಕೊಂಡ ಆರಂಭಿಕ ದಿನಗಳು ಹೇಗಿದ್ದವು?**

ಸಾಮಾನ್ಯವಾಗಿ ಕವಿತೆಗೆ ಸ್ಫೂರ್ತಿ ಕೊಡುವುದು ಯಾವುದು ಹೇಳಿ? ನನ್ನ ಪ್ರಕಾರ ಪ್ರೀತಿ. ನನ್ನ ಹೈಸ್ಕೂಲ್ ನೋಟ್ ಪುಸ್ತಕಗಳು ಬಹುತೇಕ ಕವಿತೆಗಳಿಂದ ತುಂಬಿರುತ್ತಿದ್ದವು. ಕೆಲವು ಬಹಳ ಕೆಟ್ಟದಾಗಿದ್ದವು, ಕೆಲವು ಚೆನ್ನಾಗಿದ್ದವು. ಜರಿಹುಳ, ಎರೆಹುಳ, ಕೆಲವು